ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಿರಿಯೂರು ತಾಲ್ಲೂಕಿಗೆ ಅನ್ಯಾಯವಾಗಿಲ್ಲವೆಂದು ಅಪ್ಪಣೆ ಕೊಡಿಸಿದರು. ಗಾಯತ್ರಿ ಜಲಾಶಯದ ನೀರು ಜವನಗೊಂದನಹಳ್ಳಿ ಹೋಬಳಿಗೆ ಹೋಗಲು ಅವಕಾಶ ವಿಲ್ಲದೇ ಇರುವುದು ಸರ್ಕಾರದ ಅವಗಾಹನೆಗೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಗಾಯತ್ರಿ ಜಲಾಶಯದ ನೀರು ಹಿರಿಯೂರು ತಾಲ್ಲೂಕಿನಲ್ಲಿ ಅರ್ಧಭಾಗ, ತುಮಕೂರು ಜಿಲ್ಲೆಯಲ್ಲಿ ಅರ್ಧ ಭಾಗ ಉಪಯೋಗಿಸು ತ್ತಾರೆಂದು ಭಾವಿಸಿಕೊಂಡಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಗಾಯತ್ರಿ ಜಲಾಶಯದ ನೀರು ಹಿರಿಯೂರು ತಾಲ್ಲೂಕು ಜವನಗೊಂಡನಹಳ್ಳಿಯಲ್ಲಿ ಉಪಯೋಗಿಸಲು ಯಾವ ಮಾರ್ಗವನ್ನು ಕಲ್ಪಿಸಿಲ್ಲ, Channel ತೆಗೆದಿಲ್ಲ. ಇದು ಯಾವಾಗಲೂ ಅಭಾವ ಪೀಡಿತ ಪ್ರದೇಶವಾಗಿದೆ ಎನ್ನುವುದು ತಮ್ಮ ಅವಗಾಹನೆಗೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಂದಿದೆ ಪರಿಶೀಲನೆ ಆಗುತ್ತಿದೆ.

Accommodation for the Sahyadri College, Shimoga.

*Q.—31. Smt. RATNAMMA MADHAVA RAO (Shimoga).—

Will the Government be pleased to state :—

(*a*) whether it has come to their notice that the Sahyadri College building at Shimoga originally designed to accommodate 300 students has now a strength of over 1,500 without any proportionate increase in the accommodation ;

(*b*) whether Government will immediately institute enquiries as to the accommodation required for the present strength at least and take immediate action to provide required accommodation ;

(*c*) whether they will immediately take action to provide accommodation in the recently abolished Medical School building which is vacant ?

A.—Sri S. R. KANTHI (Minister for Education).—

(*a*) Yes.

(*b*) and (*c*) The present accommodation in the College building is inadequate for its needs and the question of providing additional accommodation to the College in the Medical School building is under active consideration.

ಶ್ರೀಮತಿ ರತ್ನಮ್ಮ ಮಾಧವ ರಾವ್.—ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಉತ್ತರ ಕೊಟ್ಟಿದ್ದೀರಿ. ಅಲ್ಲಿ ಕಟ್ಟಡ ಖಾಲಿಯಾಗಿ ನಾಲ್ಕು ತಿಂಗಳ ಮೇಲೆ ಆಯಿತು. ಏಕೆ ನಿಧಾನವಾಗಿದೆ, ತೊಂದರೆ ಏನಾದರೂ ಇದೆಯೇ ?

† ಶ್ರೀ ಎಸ್. ಆರ್. ಕಂಠಿ.—ಪಬ್ಲಿಕ್ ಹೆಲ್ತ್ ಇಲಾಖೆಯವರು ಒಪ್ಪಬೇಕು. ಈ ವಿಚಾರದಲ್ಲಿ ಸರ್ಕಾರ ಅವರ ಜೊತೆಯಲ್ಲಿ ಮಾತನಾಡುತ್ತಿದೆ.

ಶ್ರೀಮತಿ ರತ್ನಮ್ಮ ಮಾಧವ ರಾವ್.—ಮುಂದಿನ ವರ್ಷದ ಅರಂಭದ ವೇಳೆಗಾದರೂ ಕೊಡಿಸುವ ಹಾಗೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಆಗಬಹುದು. ಅಷ್ಟರೊಳಗೇ ಆದರೂ ಆಗುತ್ತದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಸಹ್ಯಾದ್ರಿ ಕಾರೇ ಜಿನಲ್ಲಿ ಹುಡುಗರ ಸಂಖ್ಯೆ ಜಾಸ್ತಿ ಇದೆ. ಪೆಡಿಕರ್ ಸ್ಕೂಲಿನ ಕಟ್ಟಡವನ್ನು ವಹಿಸಿಕೊಡಬೇಕು ಎನ್ನುವುದರ ಬಗ್ಗೆ ಮುಖ್ಯ ಮಂತ್ರಿಗಳು ಭಧ್ರಾವತಿಗೆ ದಯ ಮಾಡಿಸಿದ್ದಾಗ, ಒಂದು ಮನವಿಯನ್ನು ಕೊಡಲಾಯಿತು. ಆಗ ಅವರು ತಕ್ಷಣ ಆ ಕಟ್ಟಡವನ್ನು ವಹಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದು ನಿಜವೇ ನ್ಯಾಯವೆ ?

ಶ್ರೀ ಎಸ್. ಆರ್. ಕಂಠಿ.—ಮುಖ್ಯ ಮಂತ್ರಿಗಳಿಗೆ ಆತರಹ ಮನವಿಯನ್ನು ಕೊಟ್ಟಿದ್ದು ನಿಜ. ಅದೇ ವಿಚಾರನಡೆದಿದೆ. ಆ ಜಾಗ ಖಾಲಿ ಇದೆ. ಪಬ್ಲಿಕ್ ಹೆಲ್ತ್‌ನವರನ್ನು ಕೇಳಿ ಕೊಡ ಬೇಕಾಗುತ್ತದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ತಕ್ಷಣ ವಹಿಸಿ ಕೊಡುವುದಕ್ಕೆ ಏರ್ಪಾಡು ಮಾಡುತ್ತಿರಾ ?

ಶ್ರೀ ಎಸ್. ಆರ್. ಕಂಠಿ.—ಎಷ್ಟು ತಕ್ಷಣ ಆಗ ಬೇಕೋ ಅಷ್ಟು ತಕ್ಷಣ ಮಾಡುತ್ತೇವೆ.

ಶ್ರೀ ಜಿ. ದುಗ್ಗಪ್ಪ.—ಆರೋಗ್ಯ ಮಂತ್ರಿಗಳ ನಂಗಡ ತಾವು ಮಾತನಾಡಿದ್ದಿರಾ ?

ಶ್ರೀ ಎಸ್. ಆರ್. ಕಂಠಿ.—ಅವರ ನಂಗಡ ಮಾತನಾಡಿದ್ದೇನೆ. ಅದಕ್ಕೇ active consideration ಎಂದು ಹಾಕಿರುವುದು.

ಶ್ರೀ ಜಿ. ವಿ. ಗೌಡ.—ಒಂದು ವೇಳೆ ನಮ್ಮ ಉಪಯೋಗಕ್ಕೇ ಬೇಕೆಂದು ಆರೋಗ್ಯ ಇಲಾಖೆಯವರು ಹೇಳುವುದಾದರೆ ಇನ್ನು ಯಾವ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—Hypothetical question ಕೇಳಿದರೆ ಏನು ಉತ್ತರ ಕೊಡಬೇಕು.

Sri S. SHIVAPPA.—Supplementary to (*a*) : where are these 1200 students being accommodated at present ?

ಶ್ರೀ ಎಸ್. ಆರ್. ಕಂಠಿ.—ಹಾಗೂ ಹೀಗೂ ಅಲ್ಲಿಯೇ ನಡೆಸಿದ್ದೇವೆ.

Offices in which Efficiency Audit is conducted every year for the last three years.

*Q.—83. Sri T. MADAIAH GOWDA (Ramanagaram).—

Will the Government be pleased to state :—

(*a*) which are all the offices in which efficiency audit is conducted every year for last three years ;

(*b*) the result of such audit ?

A.—Sri S. NIJALINGAPPA (Chief Minister).—

(*a*) What exactly the member means by 'efficiency audit' of offices is not clear. With the reorganisation of the Department of Efficiency Audit and Anti-Corruption, sanctioned in G.O. No. GAD 43 BAC 59, dated 10th August 1959 read with GAD 70 OOM 59, dated 2nd September 1959 there is no separate agency exclusively meant for inspection of offices for efficiency audit purposes. The Heads of Departments and subordinate officers are required to inspect their own offices periodically and at least once a year and see that the offices are functioning properly and efficiently. Besides, all superior officers are required to inspect all the subordinate offices under their control at least once a year for satisfying themselves that the offices are functioning properly and efficiently.

The Accountant General also conducts statutory audit of all Government offices according to a programme and scale fixed by him.

(*b*) The irregularities observed during such inspections are generally set right before the next inspection is taken up.

ಶ್ರೀ ಟಿ. ಮಾದಯ್ಯ ಗೌಡ.—ಎಫಿಷಿಯೆನ್ಸಿ ಆಡಿಟ್ಟುಡಿಪಾರ್ಟಿಮೆಂಟು ತನ್ನ ಕೆಲಸವನ್ನು ಸರಿಯಾಗಿ ಫಂಕ್ಷನ್ ಮಾಡದಿದ್ದರೆ, ಅದನ್ನು ಎಫಿಷಿಯೆನ್ಸಿ ಆಡಿಟ್ ಡಿಪಾರ್ಟುಮೆಂಟು ಎಂದೇ ಕರೆಯುತ್ತೀರಿ ?

†ಶ್ರೀ ಎಸ್. ನಿಜಲಿಂಗಪ್ಪ.—ಉತ್ತರ, ಈಗ ಕೊಟ್ಟಿರುವ ಉತ್ತರದಲ್ಲೇ ಇದೆ.

ಶ್ರೀ ಟಿ. ಮಾದಯ್ಯಗೌಡ.—ನವಕಾರದ ಇತರ ಇಲಾಖೆಗಳಲ್ಲಿ ಏನಾದರೂ ಇನ್ಸ್‌ಪೆಕ್ಷನ್ನನ್ನು ನಡೆಸುತ್ತಿದ್ದಾರೆಯೇ ? ಹಾಗೆ ಮಾಡಿದ್ದರೆ ಅದನ್ನು ಎಫಿಷಿಯೆನ್ಸಿ ಆಡಿಟ್ಟು ಮತ್ತು ಆಂಟಿಕರಪ್ಷನ್ನು ಇಲಾಖೆಯವರು ಇನ್ಸ್‌ಪೆಕ್ಷನ್ನನ್ನು ಮಾಡಿ ಅದನ್ನು ರೆಪ್ಯೂ ಮಾಡಿ ಏನಾದರೂ ವರದಿ ಕಳುಹಿಸುತ್ತಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ರೆಪ್ಯೂ ಮಾಡುತ್ತಾರೆ. ಇದರ ವರದಿ ಬಹುಶಃ ಆಗಿಂದಾಗ್ಗೆ ಸದಸ್ಯರುಗಳಿಗೂ ಕಳುಹಿಸುತ್ತಿದ್ದಾರೆಂದು ತೋರುತ್ತೆ.

Sri M. C. BASAPPA.—What exactly is meant by Efficiency Audit by Government ?

Sri S. NIJALINGAPPA.—This is just like asknig who is Sita to Rama after hearing entire Ramayana. My friend has been here for a long time and he must know what is meant by Efficiency Audit.

Sri M. C. BASAPPA.—The question is whether they are doing their duty properly ?

Sri S. NIJALINGAPPA.—Yes. They are doing their duty properly.

Sri C. J. MUCKANNAPPA.—What is the result?

Sri S. NIJALINGAPPA.—Efficiency has increased.

Sri M. Y. GHORPADE.—Are any steps being taken by Government to see that no files are pending in any office for more than a certain number of days ?

Sri S. NIJALINGAPPA.—That is being done. Action has been taken and we are taking action.

Sri C. J. MUCKANNAPPA.—There are two sections, one is Anti-Corruption and the other is Efficiency Audit. May I know the functions of Efficiency Audit in the State ?

Sri S. NIJALINGAPPA.—My friend has himself given the answer to his question.

Sri C. J. MUCKANNAPPA.—I want to know what are the functions of the officer who is in charge of Efficiency Audit and how many offices he inspects every year.

Sri S. NIJALINGAPPA.—Heads of Departments and also officers above a certain level in charge of offices are always on the watch. They inspect the offices under them and send reports. The Efficiency Audit goes through them and sees what action can be taken. The Organisation and Methods Section is also a part of this section. Both of them attend to this work and see what improvements can be made, how much staff can be reduced, etc.

Sri GANJI VEERAPPA.—Is it a fact that Government have recently passed orders to take away the function of the Efficiency Audit Department so far as it relates to auditing of the work of the P.W.D. ?

Sri S. NIJALINGAPPA.—Yes. We have constituted a technical cell for the P.W.D.

Sri G. V. GOWDA.—Supplementary to (*b*): "It is stated that the irregularities observed during such inspections are generally set right before the next inspection is taken up." Is Government aware that in several cases the irregularities pointed out by the

Accountant General have not been set right ?

Sri S. NIJALINGAPPA.—I would request my friend to give me a list of such irregularities.

Sri G. V. GOWDA.—They have been disclosed in the Audit Report.

Mr. SPEAKER.—How does the Accountant General come under this ?

Sri G. V. GOWDA.—It is stated that the Accountant General also conducts statutory audit of all Government Offices.

Sri S. NIJALINGAPPA.—That is right.

Sri S. M. KRISHNA.—Would Government be pleased to say the number of officers attached to Efficiency Audit ?

Sri S. NIJALINGAPPA.—I want notice.

Sri SANJEEVANATH AIKALA.—What is the relation between Efficiency Audit and the O. & M. Department ?

Sri S. NIJALINGAPPA.—O.&M. Section is a part of it.

Loss to the crops due to monkeys in Kolar District and other parts of the State.

*Q.—147. Sri P. VENKATAGIRIYAPPA (Kolar).—

Will the Government be pleased to state :—

(*a*) whether they are aware of the enormous loss to the crops due to the existence of monkeys in large number in Kolar District and other parts of the State ;

(*b*) the steps they have taken or intend to take to deal with the monkey's menace ?

*A.—Sri M. V. KRISHNAPPA (Minister for Revenue).—

(*a*) No.

(*b*) Does not arise in view of reply to clause (*a*).

Sri P. VENKATAGIRIYAPPA.—I put Question No.147.

Sri M. V. KRISHNAPPA.—Answer are printed, but I would like to make one correction that there is some loss by monkeys in some districts.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೋತಿಗಳಿಂದ ಬೆಳೆಗಳಿಗೆ ನಮ್ಮ ಜಿಲ್ಲೆಯಲ್ಲಿ ಜಾಸ್ತಿ ನಷ್ಟವಾಗುತ್ತಿರುವುದರಿಂದ ಇದನ್ನು ತಡೆಗಟ್ಟಲು ಏನು ಕಾರ್ಯಕ್ರಮವನ್ನು ತರಲು ಸರಕಾರ ಯೋಚನೆ ಮಾಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಮಗೆ ಗೊತ್ತಿರುವಂತೆ ಈ ಕಪಿಗಳ ವಿಚಾರದಲ್ಲಿ ಏನೋ ಒಂದು ತರಹದ ಪೂಜ್ಯ ಭಾವನೆ ಬಂದಿದೆ. ಹನುಮಪ್ಪನ ವಂಶಕ್ಕೆ ಸೇರಿದವರು ಎಂದು ಹನುಮಪ್ಪ ಇತರ ಹೆಸರುಗಳನ್ನಿಟ್ಟುಕೊಳ್ಳುತ್ತಾರೆ. ಆದಕಾರಣ ಇಂತಹ ಕಪಿಗಳನ್ನು ತೊಂದರೆ ಪಡಿಸಲು ರೈತರು ಇಷ್ಟಪಡುವುದಿಲ್ಲ. ಏನೋ ಪುರಾತನದಿಂದ ಬಂದಿರುವ ಈ ನಂಬಿಕೆಯಿಂದ ಈ ಕಪಿಗಳನ್ನು ನಾಶಮಾಡುವುದಕ್ಕಾಗುವುದಿಲ್ಲ. ನಾನು ಹಿಂದೆ ಚೈನಾದೇಶಕ್ಕೆ ಹೋಗಿದ್ದಾಗ ಅಲ್ಲಿ ನೋಡಿದ್ದರಲ್ಲಿ ಒಂದು ಕಪಿಯನ್ನೂ ಕಾಣಲಿಲ್ಲ. ಚೈನಾ ದೇಶದವರು ಕ್ಷಾಮ ಬಂದಾಗ ಈ ಕಪಿಗಳನ್ನು ಕೊಂದು ತಿಂದುಹಾಕಿಬಿಡುತ್ತಾರೆ. ಆದರೆ ಇಲ್ಲಿ ಹಾಗಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಪರದೇಶಗಳಿಂದ ಈ ಕೋತಿಗಳನ್ನು ಕಳುಹಿಸಬೇಕೆಂದು ಇಂಡಿಯಾ ಸರಕಾರಕ್ಕೆ ಹಿಂದೆ ಕೇಳಿಕೆ ಬಂದಿತ್ತೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಹಿಂದೆ ದೆಹಲಿಯಲ್ಲಿದ್ದಾಗ ಆ ರೀತಿ ಬೇಡಿಕೆ ಬಂದಿತ್ತು. ಆಗ ಭಾರತಸರಕಾರದವರು ಕಪಿಗಳನ್ನು ತರಿಸಿ ಕಳುಹಿಸಿನ ಮಾರು ೧,೫೦,೦೦೦ಷ್ಟು ಫಾರಿನ್ ಎಕ್ಸ್‌ಚೇಂಜ್ ಪಡೆಯಲು ಸಾಧ್ಯವಾಯಿತು. ದೆಹಲಿಯಿಂದ ಆ ರೀತಿ ಮೂರು ವರ್ಷಗಳು ಕಳಿಸಿದ್ದೆವು. ಅದನ್ನು ತೆಗೆದುಕೊಳ್ಳಲು ಆಗ ಒಂದು ಅಮೆರಿಕನ್ ಕಂಪೆನಿಯು ಸಿದ್ಧವಾಗಿತ್ತು. ಆದರೆ ಶ್ರೀಮತಿ ರುಕ್ಮಿಣಿ ಅರುಂಡೇಲ್ ಮತ್ತಿತರ ಪ್ರಮುಖರು ಭಾರತ ಸರಕಾರದ ಮೇಲೆ ಬಹಳ ದೊಡ್ಡ ಗಲಾಟೆ ಮಾಡಿ ಈ ರೀತಿ ಕಪಿಗಳನ್ನು ಖಂಡಿತವಾಗಿ ಪರದೇಶಕ್ಕೆ ಕಳುಹಿಸಬಾರದು. ಇದರಿಂದ ನಮ್ಮ ದೇಶದ ಪುರಾತನ ಸಂಸ್ಕೃತಿ ಹಾಳಾಗುತ್ತದೆ. ಇದಕ್ಕೆ ಬದಲು ಹೊರದೇಶಗಳಲ್ಲಿರುವ ಕಪಿಗಳನ್ನು ಇಲ್ಲಿಗೆ ತಂದು ಸಾಕಿ ಎಂದರು. ಹೀಗಾಗಿ ಅನೇಕ ನಿರ್ಬಂಧಗಳನ್ನು ಹಾಕಬೇಕಾಗಿ ಬಂತು. ಈ ನಿರ್ಬಂಧದಿಂದ ಅಮೆರಿಕದ ಕಂಪೆನಿಯವರು ನಷ್ಟವಾಗುತ್ತೆ ಎಂದು ಕಂಪನಿಯೇ ಮುಚ್ಚಿ ಹೋಯಿತು. ಈ ಹಿಂದೆ ಸರಕಾರಕ್ಕೆ ಒಂದು, ಒಂದೂವರೆ ಕೋಟಿಯಷ್ಟು ಲಾಭ ಬರುತ್ತಿತ್ತು.

ಶ್ರೀ ಎಸ್. ಎಂ. ಕೃಷ್ಣ.—ನಮ್ಮ ಮೈಸೂರು ಸಂಸ್ಥಾನದಲ್ಲಿ ಕೆಲವು ಜಿಲ್ಲೆಗಳಲ್ಲಿ ಕಪಿಗಳಿಂದ ಆಗ ತಕ್ಕ ನಷ್ಟ ಬಹಳ ಹೆಚ್ಚಾಗಿದೆ ಎಂದು ಇಂಡಿಯಾ ಸರಕಾರಕ್ಕೆ ಮನವಿ ಮಾಡಿ ಅಮೆರಿಕದ ಕಂಪೆನಿಯ ಮೂಲಕ ಪುನಃ ಫಾರಿನ್ ಎಕ್ಸ್‌ಚೇಂಜನ್ನು ಪಡೆಯಲು ಸಾಧ್ಯವಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದನ್ನು ಇಂಡಿಯಾ ಸರಕಾರದವರು ಮಾಡಬೇಕು. ಆದರೆ ಹಿಂದೆ ಒಂದು ಸಾರಿ ಕಪಿಗಳನ್ನು ತರಿಸಿ ರೆಡ್ ಫೋರ್ಟಿನ ಬಳಿ ಇಟ್ಟಾಗ ಅವಕ್ಕೆ ಸರಿಯಾದ ಆಹಾರ ಕೊಡದೆ ತೊಂದರೆಯಾಯಿತು ಎಂದು ಪಾರ್ಲಮೆಂಟಿನಲ್ಲಿ ಕೆಲ ಸದಸ್ಯರು ದೊಡ್ಡ ಗಲಾಟೆ ಮಾಡಿ ಈ ರೀತಿ ಕಪಿಗಳನ್ನು ಕಳುಹಿಸುವುದನ್ನು ನಿಲ್ಲಿಸಬೇಕೆಂದು ಸಲಹೆ ಮಾಡಿದ್ದರು. ಈ ನಿರ್ಬಂಧದಿಂದಾಗಿ ಅಮೆರಿಕಾದ ಕಂಪೆನಿಯು ಹೊರಟುಹೋಯಿತು.

ಶ್ರೀ ಸಿ. ಆರ್. ರಂಗೇಗೌಡ.—ಕಪಿಗಳು ಹಿಂದೆ ಕಾಡಿನಲ್ಲಿ ವಾಸವಾಗಿರುತ್ತಿದ್ದುವು. ಈಗ ಕಾಡಿನಲ್ಲಿರುವ ಮರಗಳೆಲ್ಲಾ ಹಾಳಾಗಿ ರೈತರು ಅಲ್ಲಿ ವ್ಯವ